ದಿನಾಂಕಃ 20.08.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ**

ಲಕ್ಷ್ಮಮ್ಮ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ದಿಃ 20.10.2020ರಂದು ನನ್ನನ್ನು ಹಣ ಕೇಳಿದ್ದರು. ಆ ದಿನ ಯಾವ ವಾರ ಇತ್ತು ಎಂದು ನೆನಪಿಲ್ಲ. ಹಣ ಕೇಳಲು ಬಂದಾಗ ಸಂಜೆ 7 ಗಂಟೆ ಆಗಿತ್ತು. ಆರೋಪಿಯ ಫೋನ್ ನಂಬರ್ ನನ್ನ ಬಳಿ ಇತ್ತು ಆದರೆ ಅವರು ನನ್ನ ಫೋನ್ ನಂಬರ್ ಅನ್ನು ಬ್ಲಾಕ್ ಮಾಡಿದ್ದಾರೆ. ಈಗ ಅವರ ಫೋನ್ ನಂಬರ್ ನನಗೆ ನೆನಪಿಲ್ಲ. ಬ್ಯಾಂಕಿನಿಂದ ಹಿಂಬರಹ ಬಂದ ನಂತರ ಆರೋಪಿಯನ್ನು ಭೇಟಿ ಮಾಡಿರುತ್ತೇನೆ ಎಂದು ದೂರಿನಲ್ಲಿ ಹೇಳಿದ್ದೀರಿ, ಯಾವ ದಿನಾಂಕ ಭೇಟಿ ಮಾಡಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ ನೆನಪಿಲ್ಲ ಎಂದು ನುಡಿಯುತ್ತಾರೆ.

2016 ನವೆಂಬರ್ ತಿಂಗಳಿನಲ್ಲಿ 500, 1000 ಹಾಗೂ 2000 ನೋಟುಗಳು ಅಮಾನೀಕರಣ ಆಗಿರುತ್ತವೆ ಎಂದರೆ ಸರಿ. 20,000ಕ್ಕಿಂತ ಜಾಸ್ತಿ ವ್ಯವಹಾರವನ್ನು ಬ್ಯಾಂಕ್ ಖಾತೆಯ ಮೂಲಕ ಮಾಡಬೇಕು ಎಂದು ನಿಯಮ ಇದೆ ಆದರೆ ಆರೋಪಿ ತನಗೆ ತುರ್ತಾಗಿ ಹಣ ಬೇಕು ಎಂದು ಕೇಳಿದ್ದು ನಾನು ಬಂಡವಾಳಕ್ಕಾಗಿ ಎತ್ತಿಟ್ಟಂತಹ ದುಡ್ಡನ್ನೇ ಆರೋಪಿಗೆ ನಗದು ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿ ಸರ್ಕಾರಿ ನೌಕರರಾಗಿದ್ದು, ಆಥಿಕವಾಗಿ ಚೆನ್ನಾಗಿದ್ದಾರೆ ಎಂದರೆ ಸಾಕ್ಷಿ ಜಯ್ ಕೂಮಾರ್ ವಕೀಲರು ಆರೋಪಿಯ ಬಗ್ಗೆ ನನಗೆ ಹೇಳಿದ್ದು, ಅವರಿಗೆ ಹಣದ ಅವಶ್ಯಕತೆ ಇದೆ, ಆಕಾಶವಾಣಿಯುಲ್ಲಿ ಕೆಲಸ ಮಾಡುತ್ತಾರೆ, ಹಣ ಸಹಾಯ ಮಾಡಿ ಎಂದು ಹೇಳಿದ್ದಕ್ಕೆ ನಾನು ಆರೋಪಿಗೆ ಹಣ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನೇರವಾಗಿ

ನಿಮ್ಮ ಮತ್ತು ಆರೋಪಿಯ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ಇರಲ್ಲಿಲ್ಲ, ಜಯಕುಮಾರ್ ಹಾಗೂ ಆರೋಪಿಯ ಮಧ್ಯೆ ಹಣಕಾಸಿನ ವ್ಯವಹಾರ ಇತ್ತು ಎಂದರೆ ಸಾಕ್ಷಿ ಮೂರು ಜನರ ಮಧ್ಯೆ ಇತ್ತು ಎಂದು ನುಡಿಯುತ್ತಾರೆ. ಜಯಕುಮಾರ್ ಅವರು ಸಹ ಈ ವ್ಯವಹಾರದಲ್ಲಿ ಇದ್ದರೂ ಎಂದು ದೂರಿನಲ್ಲಿ ಹಾಗೂ ನೋಟೀಸಿನಲ್ಲಿ ಬರೆದಿರುತ್ತದೆ. ನಿಪಿ 1ರಲ್ಲಿ ಬರೆದ ಚಂದ್ರ ಹೆಚ್ ಸಿ ಎನ್ನುವ ಬರವಣಿಗೆ ಹಾಗೂ ನನ್ನ ವಕಾಲತ್ ಇಲ್ಲಿ ಬರೆದಿರುವ ಚಂದ್ರ ಹೆಚ್ ಸಿ ಎನ್ನುವ ಬರವಣಿಗೆ ಒಂದೇ ರೀತಿಯಾಗಿದೆ ಎಂದರೆ ಸರಿಯಲ್ಲ. 2020 ಮಾರ್ಚ್ ತಿಂಗಳಿನಲ್ಲಿ ಕೋವಿಡ್ 19 ಬಂದಿರುತ್ತದೆ ಎಂದರೆ ಹೌದು. ಆ ಸಮಯದಲ್ಲಿ ಜನರು ಓಡಾಡಲು ಸರ್ಕಾರ ನಿರ್ಬಂಧನೆ ಮಾಡಿತ್ತು ಎಂದರೆ ಸಾಕ್ಷಿ ಸಮಯವನ್ನು ನಿಗದಿ ಪಡಿಸಲಾಗಿತ್ತು ಎಂದು ನುಡಿಯುತ್ತಾರೆ.

ಆರೋಪಿ ಲಕ್ಷ್ಮಮ್ಮ ಎನ್ನುವವರಿಗೆ ಚೀಟಿ ಹಣ ಭದ್ರತೆಗಾಗಿ ಚೆಕ್ಕು ಕೊಟ್ಟಿದ್ದರು ಎಂದರೆ ಸರಿಯಲ್ಲ . ಸದರಿ ಲಕ್ಷ್ಮಮ್ಮ ಅವರಿಂದ ನಾನು ಚೆಕ್ಕು ಪಡೆದು ಆರೋಪಿಯ ವಿರುದ್ಧ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ . ನನಗೂ ಮತ್ತು ಆರೋಪಿಗೂ ಯಾವುದೇ ಪರಿಚಯವೇ ಇಲ್ಲ ಎಂದರೆ ಸರಿಯಲ್ಲ . ನನಗೆ ಆದಾಯ ಇದೆ ಎಂದು ತೋರಿಸಲು ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.